**CC. NO. 550/2025**
**<u>ಪಿಡಬ್ಲ್ಯೂ:1</u>**

ದಿನಾಂಕಃ **10-04-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ. ಎಸ್. ಪಿ. ವಕೀಲರಿಂದಃ</u>

1. ದಿನಾಂಕಃ 05-12-2025 ರಂದು ಆರೋಪಿ ಎಸ್, ಪಿ ರವರಿಗೆ ನೀಡಿದ ದೂರಿನ ಪ್ರತಿಯನ್ನು ಡಿ. ವೈ. ಎಸ್. ಪಿ ಹಾಗೂ ಪೊಲಿಸ ವೃತ್ತ ನಿರೀಕ್ಷಕರಿಗೂ ಸಹ ಸಲ್ಲಿಸಿರುತ್ತಾನೆ ಎಂದರೆ ನನಗೆ ಗೊತಿತಲ್ಲ. ಆತ ಸದರಿ ದೂರು ನೀಡಿದ ನಂತರ ಪೋಲಿಸರು ನನ್ನನ್ನು ಮತ್ತು ಮಂಜುನಾಥರವರನ್ನು ಪೋಲಿಸ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆಗ ನಾನು ಪೋಲಿಸರು ಯಾವುದೇ ಕ್ರಮ ಕೈಗೊಳ್ಳದಂತೆ ಅವರ ಮೇಲೆ ರಾಜಕೀಯ ಒತ್ತಡ ಹೇರಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ತಂಗಿ ಜೈನುಲ್ಲಾ ಐನ ರವರ ಪರಿಚಯವಿದೆ ಇದೆ ಎಂದರೆ ಸರಿ. ನನಗೆ ಕಳೆದ 3 ವರ್ಷಗಳಿಂದ ಸದರಿ ಜೈನುಲ್ಲಾ ರವರ ಪರಿಚಯವಿದೆ. ನಿಮಗೆ ಸದರಿ ಜೈನುಲ್ಲಾರವರ ಪರಿಚಯ ವೈಯಕ್ತಿಕವಾಗಿ ಆಗಿರುತ್ತದೆಯೋ ಅಥವಾ ನಿಮ್ಮ ಗಂಡನ ಮೂಲಕ ಆಗಿರುತ್ತದೆಯೋ ಎಂದರೆ ಸಾಕ್ಷಿ ನನಗೆ ವೈಯಕ್ತಿಕ ಪರಿಚಯವಾಗಿರುತ್ತದೆ ಎಂದು ನುಡಿಯುತ್ತಾರೆ. ಹಿಂದಿನ ದಿನಾಂಕದಂದು ನನ್ನೊಂದಿಗೆ ನನ್ನ ತಾಯಿಯೂ ಸಹ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿ. ಆ ದಿನದಂದು ನಾನು ಆರೋಪಿಯೊಂದಿಗೆ ಫೋನ ಕರೆಯಲ್ಲಿ ಮಾತನಾಡಿದ್ದೇನು ಎಂದರೆ ಸರಿಯಲ್ಲ. ಹಿಂದಿನ ದಿನಾಂಕದಂದು ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ ಪೂರ್ವದಲ್ಲಿ ನಾನು ಹಾಗೂ ನನ್ನ ತಾಯಿ ನ್ಯಾಯಾಲಯದ ಆವರಣದಲ್ಲಿ ಆರೋಪಿಯೊಂದಿಗೆ ಮಾತನಾಡಿದ್ದೇವು ಎಂದರೆ ಸರಿ. ನಾವು ಸುಮಾರು 8-10 ನಿಮಿಷಗಳವರೆಗೆ ಮಾತನಾಡಿದ್ದೇವು. ನಾನು ಆಗ ಈ ಪ್ರಕರಣ ಹಿಂದೆ ಪಡೆದುಕೊಳ್ಳುತ್ತೇನೆ ಎಂಬ ವಿಚಾರ ಸಹ ತಿಳಿಸಿದ್ದೆನೆ ಎಂದರೆ ಸರಿಯಲ್ಲ. ಆರೋಪಿ ಪೊಲಿಸರಿಗೆ ನೀಡಿದ ದೂರನ್ನು ಹಿಂದೆ ಪಡೆದುಕೊಳ್ಳಬೇಕು ಹಾಗೂ ನಾನು ಈ ಪ್ರಕರಣ ಹಿಂದೆ ಪಡೆದುಕೊಳ್ಳುತ್ತೇನೆ ಎಂದು ಮಾತು ಆಗಿತ್ತು ಎಂದರೆ ಸರಿಯಲ್ಲ. ಆ ರೀತಿ ಮಾತು-ಕತೆ ಆಗಿದ್ದು ಸದರಿ ವಿಷಯ ನನ್ನ ತಾಯಿಗೂ ಸಹ ಗೊತ್ತಿದ್ದರೂ ಈಗ ಆ ರೀತಿ ಮಾತು ಆಗಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚೆಕ್ಕನ್ನು

ದುರಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಮಂಜುನಾಥ ಹಾಗೂ ಲಕ್ಷ್ಮೀಪುತ್ರ ಎಂಬಾತ ನನ್ನ ಗಂಡನ ಸ್ನೇಹಿತರು ಆಗಿರುತ್ತಾರೆ ಎಂದರೆ ಸರಿ. ಸದರಿ ಲಕ್ಷ್ಮೀಪುತ್ರ ರವರ ಮಾವ ವಿ.ವಿ.ಜಿ ಔಷಧ ಅಗಂಡಿಯ ಮಾಲೀಕರಾಗಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ನಿಪಿ-1 ರ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ